# ಕನ್ನಡ ಸಾಹಿತ್ಯ ಮತ್ತು ಪಾಶ್ಚಾತ್ಯ ಸ್ತ್ರೀವಾದಿ ಚಿಂತನೆಗಳು

**ಸಂಗೀತಾ ವಣಗೇರಿ***

**DOI: https://doi.org/10.5281/zenodo.21438478**

**ABSTRACT**

ಮಹಿಳೆಯರ ಸಾಮಾಜಿಕ ಸ್ಥಿತಿ, ಸಮಾನತೆ ಮತ್ತು ಹಕ್ಕುಗಳ ಕುರಿತಾದ ಪಾಶ್ಚಾತ್ಯ ಸ್ತ್ರೀವಾದಿ ಚಿಂತನೆಗಳು ಹಾಗೂ ಕನ್ನಡ ಸಾಹಿತ್ಯದಲ್ಲಿನ ಸ್ತ್ರೀವಾದದ ಅಭಿವ್ಯಕ್ತಿಗಳ ತುಲನಾತ್ಮಕ ವಿಶ್ಲೇಷಣೆಯನ್ನು ಇಲ್ಲಿ ಮಂಡಿಸಲಾಗಿದೆ. ಪಾಶ್ಚಾತ್ಯ ಜಗತ್ತಿನಲ್ಲಿ ಸ್ತ್ರೀವಾದವು ಹಕ್ಕುಗಳಿಗಾಗಿ ನಡೆದ ಮೂರು ಪ್ರಮುಖ ಹಂತಗಳ ರಾಜಕೀಯ ಮತ್ತು ಸೈದ್ಧಾಂತಿಕ ಚಳುವಳಿಯಾಗಿ ಬೆಳೆದರೆ, ಕನ್ನಡ ಸಾಹಿತ್ಯದಲ್ಲಿ ಅದು ಭಕ್ತಿಕಾಲದ ವಚನಗಳು, ನವೋದಯ ಮತ್ತು ಸಮಕಾಲೀನ ಬರಹಗಳ ಮೂಲಕ ಸ್ಥಳೀಯ ಸಂಸ್ಕೃತಿ, ಕೌಟುಂಬಿಕ ವ್ಯವಸ್ಥೆ ಹಾಗೂ ಒಳತೋಟಿಯ ಸೂಕ್ಷ್ಮ ಅನುಭವಗಳ ಪ್ರತೀಕವಾಗಿ ಹೊರಹೊಮ್ಮಿದೆ. ಪಾಶ್ಚಾತ್ಯ ಚಿಂತನೆಗಳು ವ್ಯಕ್ತಿಸ್ವಾತಂತ್ರ್ಯ ಮತ್ತು ಸಾಂಸ್ಥಿಕ ವಿಮರ್ಶೆಯ ಮೇಲೆ ನಿಂತಿದ್ದರೆ, ಕನ್ನಡದ ಸ್ತ್ರೀವಾದವು ಮೌನ, ಪ್ರತಿರೋಧ ಮತ್ತು ಸಹನೆಗಳ ಮೂಲಕ ಮಹಿಳೆಯ ಅಸ್ಮಿತೆಯನ್ನು ಕಟ್ಟಿಕೊಡುತ್ತದೆ. ಅಕ್ಕಮಹಾದೇವಿ, ತ್ರಿವೇಣಿ, ವೈದೇಹಿಯವರಂತಹ ಲೇಖಕಿಯರ ಬರಹಗಳನ್ನು ಪಾಶ್ಚಿಮಾತ್ಯ ಚಿಂತಕರ ತಾತ್ವಿಕತೆಯೊಂದಿಗೆ ಮುಖಾಮುಖಿಯಾಗಿಸಿ, ಭಿನ್ನ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಸ್ತ್ರೀ ಸಂವೇದನೆಯು ಹೇಗೆ ರೂಪುಗೊಂಡಿದೆ ಎಂಬುದನ್ನು ನಿರೂಪಿಸಲಾಗಿದೆ.

**KEYWORDS:** ಕನ್ನಡ ಸಾಹಿತ್ಯ, ಪಾಶ್ಚಾತ್ಯ ಸ್ತ್ರೀವಾದ, ಮಹಿಳಾ ಅಸ್ಮಿತೆ, ಲಿಂಗ ಸಮಾನತೆ, ಸಾಂಸ್ಕೃತಿಕ ಅಭಿವ್ಯಕ್ತಿ.

* **ಸಂಗೀತಾ ವಣಗೇರಿ,** ಉಪನ್ಯಾಸಕರು, ಕೆ.ಎಲ್.ಇ. ಸಂಸ್ಥೆಯ ಜೆ.ಟಿ. ಕಾಲೇಜು, ಗದಗ.

ಸ್ತ್ರೀವಾದ (Feminism) ಎಂಬುದು ಮಹಿಳೆಯರ ಸಾಮಾಜಿಕ ಸ್ಥಿತಿ, ಹಕ್ಕುಗಳು ಮತ್ತು ಸಮಾನ ಅವಕಾಶಗಳ ಕುರಿತ ಚಿಂತನೆಯ ಸಂಕಲನವಾಗಿದೆ. ಪಾಶ್ಚಾತ್ಯದಲ್ಲಿ ಇದು ಚಳುವಳಿಯ ರೀತಿಯಲ್ಲಿದ್ದರೆ, ಕನ್ನಡ ಸಾಹಿತ್ಯದಲ್ಲಿ ಮಹಿಳೆಯರ ಬದುಕಿನ ಅನುಭವಗಳು, ಅವರ ಕಷ್ಟಗಳು ಮತ್ತು ಹೋರಾಟಗಳು ವೈವಿಧ್ಯಮಯವಾಗಿ ಅಭಿವ್ಯಕ್ತವಾಗಿವೆ. ಈ ಎರಡರ ನಡುವಿನ ಸಂಬಂಧವನ್ನು ತಿಳಿದುಕೊಳ್ಳುವುದು ಆಧುನಿಕ ಸಾಹಿತ್ಯದ ಅಧ್ಯಯನದಲ್ಲಿ ಅತ್ಯಂತ ಪ್ರಮುಖವಾಗಿದೆ. ಕನ್ನಡ ಸಾಹಿತ್ಯ ಮತ್ತು ಪಾಶ್ಚಾತ್ಯ ಸ್ತ್ರೀವಾದಿ ಚಿಂತನೆಗಳ ಸಂಬಂಧವು ಒಂದು ಜೀವಂತ ಸಂವಾದವಾಗಿದೆ. ಪಾಶ್ಚಾತ್ಯ ತತ್ವಗಳು ಕನ್ನಡ ಸಾಹಿತ್ಯಕ್ಕೆ ಹೊಸದಾರಿಗಳನ್ನು ತೆರೆದರೆ, ಕನ್ನಡದ ಸ್ಥಳೀಯ ಅನುಭವಗಳು ಆ ತತ್ವಗಳನ್ನು ಪುನರ್ವ್ಯಾಖ್ಯಾನಿಸಿ ಸಮೃದ್ಧಗೊಳಿಸಿವೆ. ಇದರಿಂದ ಸ್ತ್ರೀವಾದವು ಒಂದೇ ಮಾದರಿಯ ಚಳುವಳಿಯಾಗದೆ ಬದಲಾಗಿ ವಿಭಿನ್ನ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ರೂಪಗೊಳ್ಳುವ ಚೈತನ್ಯಮಯ ಚಿಂತನೆ ಎಂಬುವುದು ಸ್ಪಷ್ಟವಾಗುತ್ತದೆ.

ಸ್ತ್ರೀವಾದ (Feminism) ಎಂದರೆ:– ಮಹಿಳೆಯರ ಮೇಲೆ ನಡೆಯುವ ಲಿಂಗ ಆಧಾರಿತ ಅಸಮಾನತೆ, ಶೋಷಣೆ ಮತ್ತು ಅನ್ಯಾಯಗಳನ್ನು ಪ್ರಶ್ನಿಸಿ ಅವರಿಗೆ ಸಮಾನ ಹಕ್ಕುಗಳು, ಸ್ವಾತಂತ್ರ್ಯ ಮತ್ತು ಗೌರವಗಳನ್ನು ದೊರಕಿಸಲು ಪ್ರಯತ್ನಿಸುವ ಚಿಂತನೆ ಹಾಗೂ ಚಳುವಳಿ ಎಂದರ್ಥ.

ಪಾಶ್ಚಿಮಾತ್ಯ ಸ್ತ್ರೀವಾದ ಚಿಂತನೆ ಆರಂಭವನ್ನು 18ನೇ ಶತಮಾನದ ಆರಂಭದಲ್ಲಿ ಗಮನಿಸಬಹುದು. ಇದು ಮೂರು ಮುಖ್ಯ ಹಂತಗಳ ಮೂಲಕ ಬೆಳವಣಿಗೆ ಕಂಡಿತು.

**1) ಮೊದಲ ಹಂತ:**

ಸ್ತ್ರೀವಾದಿ ಚಿಂತನೆಯ ಪ್ರಾರಂಭವನ್ನು ಸಾಹಿತ್ಯಿಕ ವಿದ್ವಾಂಸರು 18ನೇ ಶತಮಾನದಲ್ಲಿ ಗುರುತಿಸುವರು. ಈ ಹಂತದಲ್ಲಿ ಮಹಿಳೆಯರು ಪುರುಷರಿಗೆ ಸಮಾನವಾದ ಬುದ್ಧಿಶಕ್ತಿಯನ್ನು ಹೊಂದಿದ್ದಾರೆ ಎಂದು ಪ್ರಬಲವಾಗಿ ವಾದಿಸುತ್ತಾರೆ. ಈ ನಿಲುವುಗಳನ್ನು ಅಂದಿನ ಕಾಲದ ಚಿಂತಕರಾದ ಲೇಡಿ ಮೇರಿ ವರ್ಟ್ಲಿ ಮ್ಯಾಂಟೆಗೊ ಮತ್ತು ಮೇರಿ ವುಲ್‌ಸ್ಟನ್‌ಕ್ರಾಫ್ಟ್ ಅವರ ಚಿಂತನೆ, ಕೃತಿಗಳಲ್ಲಿ ಗಮನಿಸಬಹುದು.

**ಲೇಡಿ ಮೇರಿ ವರ್ಟ್ಲಿ ಮ್ಯಾಂಟೆಗೊ:** ಮಹಿಳೆಯರು ಸಾಮಾನ್ಯವಾಗಿ ಉನ್ನತ ಶಿಕ್ಷಣದಿಂದ ವಂಚಿತರಾಗಿದ್ದ ಯುಗದಲ್ಲಿ, ಅಪರೂಪದ ಪ್ರಜ್ಞಾಶಕ್ತಿಯೊಂದಿಗೆ ವಿದ್ಯಾಭ್ಯಾಸವನ್ನು ಪೂರೈಸಿದ ಪ್ರತಿಭಾವಂತೆಯಾಗಿದ್ದರು. ವಿಶೇಷವಾಗಿ ಅವರ 'ಪತ್ರಗಳು' (Letters, 1763) ಆ ಕಾಲಘಟ್ಟದಲ್ಲಿ ವಿಶಾಲ ಖ್ಯಾತಿಯನ್ನು ಗಳಿಸಿವೆ. ಈ ಪತ್ರಗಳ ಮೂಲಕ ಪಾಶ್ಚಿಮಾತ್ಯ ಸಮಾಜದಲ್ಲಿ ನೆಲೆಗೊಂಡಿದ್ದ ಪೂರ್ವಗ್ರಹಗಳನ್ನು ನಿವಾರಿಸಿ, ಮುಸ್ಲಿಂ ಹಾಗೂ ಕ್ರಿಶ್ಚಿಯನ್ ಸಮುದಾಯದ ಮಹಿಳೆಯರ ನಿಜಸ್ಥಿತಿಯನ್ನು ಸೂಕ್ಷ್ಮವಾಗಿ ವಿಶ್ಲೇಷಿಸಿ, ಅರ್ಥಪೂರ್ಣ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಾಳೆ.

**ಮೇರಿ ವುಲ್‌ಸ್ಟನ್‌ಕ್ರಾಫ್ಟ್ (Mary Wollstonecraft):** ಇವರ 'ಸ್ತ್ರೀಯರ ಹಕ್ಕುಗಳ ಸಮರ್ಥನೆ' (Vindication of the Rights of Women – 1792) ಕೃತಿಯು ಸ್ತ್ರೀವಾದ ಚಿಂತನೆಯ ಪ್ರಾರಂಭಿಕ ಹಾಗೂ ಮಹತ್ವದ ಘಟ್ಟವೆಂದು ಪರಿಗಣಿಸಲಾಗಿದೆ. ಅವರು ಎಲ್ಲಾ ಮಹಿಳೆಯರಿಗೆ ಸಮಾನ ಹಕ್ಕುಗಳು ಅಗತ್ಯವೆಂದು ಒತ್ತಿ ಹೇಳಿ, ಅದು ಶ್ರೀಮಂತ ವರ್ಗಕ್ಕೆ ಮಾತ್ರ ಸೀಮಿತವಲ್ಲವೆಂದು ಸ್ಪಷ್ಟಪಡಿಸುತ್ತಾರೆ. ಅವರ ದೃಷ್ಟಿಯಲ್ಲಿ ಮಹಿಳೆಯರು ಬೌದ್ಧಿಕ ಹಾಗೂ ನೈತಿಕ ಶಕ್ತಿಯನ್ನು ಬೆಳೆಸಿಕೊಳ್ಳಬೇಕು; ಪುರುಷರನ್ನು ಅನುಕರಿಸುವುದಲ್ಲ. ಸಹಶಿಕ್ಷಣ

ಮತ್ತು ಸಮಾನ ಶಿಕ್ಷಣ ಅವಕಾಶಗಳನ್ನು ಅವರು ಬಲವಾಗಿ ಸಮರ್ಥಿಸಿ, ಪುರುಷನ ಮೇಲೆ ಅವಲಂಬಿತವಾಗಿರುವ ಸ್ತ್ರೀ ಮಾದರಿಯನ್ನು ತಿರಸ್ಕರಿಸುತ್ತಾರೆ.

**2. ಎರಡನೆಯ ಹಂತ:**

1960ರಿಂದ 1980ರವರೆಗೆ ಪಾಶ್ಚಾತ್ಯ ದೇಶಗಳಲ್ಲಿ ಬಲವಾಗಿ ಬೆಳೆಯಿತು. ಮೊದಲ ಹಂತ (ಮತದಾನ ಹಕ್ಕು) ನಂತರ, ಈ ಹಂತದಲ್ಲಿ ಮಹಿಳೆಯರು ತಮ್ಮ ಜೀವನದ ಎಲ್ಲಾ ಕ್ಷೇತ್ರಗಳಲ್ಲಿ ಸಮಾನತೆಗಾಗಿ ಹೋರಾಟ ಆರಂಭಿಸಿದರು. ಇದು ಕೇವಲ ಹಕ್ಕುಗಳ ಬಗ್ಗೆ ಮಾತ್ರವಲ್ಲ, ಮಹಿಳೆಯ ಜೀವನದ ಗುಣಮಟ್ಟದ (Quality of Life) ಬಗ್ಗೆ ಚಿಂತಿಸಿದ ಚಳವಳಿಯಾಗಿದೆ. ಈ ಹಂತದ ಪ್ರಮುಖ ಚಿಂತಕರು:

1. Simone de Beauvoir (ಸಿಮೋನ್ ದ ಬೋವಾ)
2. Betty Friedan (ಬೆಟ್ಟಿ ಫ್ರೀಡನ್)
3. Gloria Steinem (ಗ್ಲೋರಿಯಾ ಸ್ಟೈನೆಮ್)
4. Kate Millett (ಕೇಟ್ ಮಿಲೆಟ್)
5. Germaine Greer (ಜರ್ಮೈನ್ ಗ್ರೀರ್)

**ಸಿಮೋನ್ ದ ಬೋವಾ:** ಮಹಿಳೆಯರ ಸ್ಥಿತಿಯ ಕುರಿತು ಆಳವಾದ ತತ್ತ್ವಚಿಂತನೆಗೆ ಅಭಿವ್ಯಕ್ತಿಯನ್ನು ಕೊಟ್ಟ ಲೇಖಕಿ. ಇವರ ದ್ವಿತೀಯ ಲಿಂಗ (The Second Sex – 1949) ಕೃತಿಯು ಪಾಶ್ಚಾತ್ಯ ಸ್ತ್ರೀವಾದ ಚಿಂತನೆಗಳಲ್ಲಿ ಮಹತ್ವದ ಸ್ಥಾನವನ್ನು ಹೊಂದಿದೆ. ಈ ಕೃತಿ 1949ರಲ್ಲಿ ಪ್ರಕಟವಾಗಿದ್ದು, ಮಹಿಳೆಯರ ಸ್ಥಿತಿ ಮತ್ತು ಅಸಮಾನತೆಯನ್ನು ಆಳವಾಗಿ ವಿಶ್ಲೇಷಿಸುತ್ತದೆ. ಈ ಗ್ರಂಥದಲ್ಲಿ ಬೋವಾ "ಮಹಿಳೆ ಹುಟ್ಟುವುದಿಲ್ಲ, ಮಾಡಲ್ಪಡುತ್ತಾಳೆ" ಎಂದು ಹೇಳುವ ಮೂಲಕ ಮಹಿಳೆಯ ಪಾತ್ರವನ್ನು ಸಮಾಜ, ಸಂಸ್ಕೃತಿ ಮತ್ತು ಪರಂಪರೆ ರೂಪಿಸುತ್ತವೆ ಎಂಬುದನ್ನು ಸ್ಪಷ್ಟಪಡಿಸುತ್ತಾರೆ. ಅವರ ಪ್ರಕಾರ ಸಮಾಜದಲ್ಲಿ ಪುರುಷನು "ಸ್ವ" (Self) ಎಂದು ಪರಿಗಣಿಸಲ್ಪಡುತ್ತಾನೆ, ಆದರೆ ಮಹಿಳೆಯನ್ನು "ಇತರ" (Other) ಎಂದು ಕಂಡು ದ್ವಿತೀಯ ಸ್ಥಾನಕ್ಕೆ ತಳ್ಳಲಾಗುತ್ತದೆ. ಪಿತೃತ್ವ ವ್ಯವಸ್ಥೆಯ ಪರಿಣಾಮವಾಗಿ ಮಹಿಳೆಯರು ಮನೆಯೊಳಗೆ ಸೀಮಿತವಾಗಿದ್ದು, ಆರ್ಥಿಕವಾಗಿ ಅವಲಂಬಿತರಾಗಿರುತ್ತಾರೆ ಮತ್ತು ಶಿಕ್ಷಣ ಹಾಗೂ ಉದ್ಯೋಗದಲ್ಲಿ ಹಿಂದುಳಿದಿರುತ್ತಾರೆ. ಈ ಸಮಸ್ಯೆಗಳನ್ನು ಪರಿಹರಿಸಲು ಮಹಿಳೆಯರು ಶಿಕ್ಷಣ ಪಡೆದು, ಉದ್ಯೋಗದಲ್ಲಿ ಭಾಗವಹಿಸಿ, ಸ್ವತಂತ್ರವಾಗಿ ನಿರ್ಧಾರಗಳನ್ನು ತೆಗೆದುಕೊಳ್ಳಬೇಕು ಎಂದು ಬೋವಾ ಒತ್ತಿಹೇಳುತ್ತಾರೆ. ಈ ಕೃತಿ ಮಹಿಳೆಯರ ಸಮಾನ ಹಕ್ಕುಗಳ ಅಗತ್ಯವನ್ನು ಬಲವಾಗಿ ಪ್ರಸ್ತಾಪಿಸಿ, ಎರಡನೇ ಅಲೆ ಸ್ತ್ರೀವಾದಕ್ಕೆ ಪ್ರೇರಣೆ ನೀಡಿದ ಮಹತ್ವದ ಗ್ರಂಥವಾಗಿ ಪರಿಗಣಿಸಲಾಗುತ್ತದೆ.

**ಕೇಟ್ ಮಿಲೆಟ್:** ಪಿತೃತ್ವ ವ್ಯವಸ್ಥೆಯ ವಿಶ್ಲೇಷಣೆ ಕುರಿತು ವಿಶ್ಲೇಷಿಸಿದ ಲೇಖಕಿ. "ಲೈಂಗಿಕ ರಾಜಕೀಯ" (Sexual Politics) ಎಂಬುದು ಕೇಟ್ ಮಿಲೆಟ್ (Kate Millett) ಅವರ ಸ್ತ್ರೀವಾದ ಚಿಂತನೆಯ ಗಾಢತೆಯನ್ನು ವ್ಯಕ್ತಪಡಿಸುವ ಪ್ರಮುಖ ಕೃತಿಯಾಗಿದೆ. ಈ ಕೃತಿಯಲ್ಲಿ "ಲೈಂಗಿಕ ರಾಜಕೀಯ" ಎಂಬ ಪರಿಕಲ್ಪನೆಯ ಮೂಲಕ ಪುರುಷಾಧಿಪತ್ಯವು ಸಮಾಜದ ಅಂತರಾಳದಲ್ಲಿ ರಾಜಕೀಯ ಶಕ್ತಿಯಾಗಿ ಕಾರ್ಯನಿರ್ವಹಿಸುತ್ತದೆ ಎಂಬುದನ್ನು ಮಿಲೆಟ್ ಸ್ಪಷ್ಟಪಡಿಸುತ್ತಾರೆ. ಕುಟುಂಬ, ಸಾಹಿತ್ಯ ಮತ್ತು ಸಂಸ್ಕೃತಿ ಮುಂತಾದ ಸಂಸ್ಥೆಗಳು ಈ ಪ್ರಾಬಲ್ಯವನ್ನು ಸ್ಥಿರಗೊಳಿಸುವ ಸಾಧನಗಳಾಗಿವೆ ಎಂದು ಅವರು ವಿಶ್ಲೇಷಿಸುತ್ತಾರೆ. ಅವರ

ಅಭಿಪ್ರಾಯದಲ್ಲಿ ಲಿಂಗಸಂಬಂಧಗಳು ವೈಯಕ್ತಿಕ ಸಂಬಂಧಗಳ ಮಿತಿಯನ್ನು ಮೀರಿ, ಸಮಗ್ರ ಸಾಮಾಜಿಕ ವ್ಯವಸ್ಥೆಯ ಭಾಗವಾಗಿವೆ. ಆದ್ದರಿಂದ ಮಹಿಳಾ ವಿಮೋಚನೆಗೆ ಪಿತೃತ್ವದ ಮೂಲ ರಚನೆಗಳನ್ನು ಪ್ರಶ್ನಿಸುವುದು ಅವಶ್ಯಕ ಎಂಬುದು ಈ ಕೃತಿಯ ಸಾರವಾಗಿದೆ.

**3. ಮೂರನೆಯ ಹಂತ:**

"ಪ್ರತಿ ಮಹಿಳೆಯ ಅನುಭವ ವಿಭಿನ್ನ, ಅದನ್ನು ಗೌರವಿಸುವುದೇ ಮೂರನೇ ಹಂತದ ಸ್ತ್ರೀವಾದದ ಮೂಲಭಾವನೆ". ಇದು ಈ ಹಂತದ ಪ್ರಮುಖ ಪ್ರತಿಪಾದನೆ. ಮೂರನೇ ಅಲೆ ಸ್ತ್ರೀವಾದವು 1990ರ ನಂತರ ಉದ್ಭವಿಸಿ, ಮಹಿಳೆಯರ ಅನುಭವ ಒಂದೇ ರೀತಿಯಲ್ಲ ಎಂಬ ಸತ್ಯವನ್ನು ಮುಂದಿಟ್ಟಿತು. ಜಾತಿ, ವರ್ಗ, ಸಂಸ್ಕೃತಿ, ಧರ್ಮ ಮತ್ತು ಲೈಂಗಿಕತೆ ಇವುಗಳ ಪ್ರಭಾವದಿಂದ ಪ್ರತಿಯೊಬ್ಬ ಮಹಿಳೆಯ ಬದುಕು ವಿಭಿನ್ನವಾಗುತ್ತದೆ ಎಂಬುದನ್ನು ಇದು ಒತ್ತಿಹೇಳುತ್ತದೆ. ಈ ಮೂಲಕ ಸ್ತ್ರೀವಾದವನ್ನು ಏಕಮುಖದ ಚಿಂತನೆಯಿಂದ ಹೊರತಂದು, ವೈವಿಧ್ಯತೆಯನ್ನು ಒಪ್ಪಿಕೊಳ್ಳುವ ಸಮಗ್ರ ದೃಷ್ಟಿಕೋನವನ್ನು ರೂಪಿಸುತ್ತದೆ. ಈ ಹಂತದ ಪ್ರಮುಖ ಲೇಖಕರನ್ನು ಈ ಕೆಳಗಿನಂತೆ ನೋಡಬಹುದು:

- Rebecca Walker (ರೆಬೆಕ್ಕಾ ವಾಕರ್) → ಹೊಸ ತಲೆಮಾರಿನ ಸ್ತ್ರೀಸ್ವರಕ್ಕೆ ಚಾಲನೆ
- Bell Hooks (ಬೆಲ್ ಹೂಕ್ಸ್) → ಅಸಮಾನತೆಗಳ ಅಂತರಸಂಬಂಧ ಅನಾವರಣ
- Judith Butler (ಜುಡಿತ್ ಬಟ್ಲರ್) → ಲಿಂಗವು ನಿರ್ಮಿತಿಯೆಂಬ ಹೊಸ ದೃಷ್ಟಿ
- Angela Davis (ಏಂಜೆಲಾ ಡೇವಿಸ್) → ಸ್ತ್ರೀವಾದಕ್ಕೆ ಸಾಮಾಜಿಕ ಹೋರಾಟದ ದಿಕ್ಕು
- Chandra Talpade Mohanty (ಚಂದ್ರ ತಲ್ಪಾಡೆ ಮೊಹಂತಿ) → ಜಾಗತಿಕ ಸ್ತ್ರೀವಾದದ ಪುನರ್ವ್ಯಾಖ್ಯಾನ

ಒಟ್ಟಾರೆಯಾಗಿ ಹಕ್ಕಿನ ಅರಿವಿನಿಂದ ಆರಂಭವಾಗಿ, ಸಮಾನತೆಯ ಹೋರಾಟದ ಮೂಲಕ, ವೈವಿಧ್ಯತೆಯ ಸ್ವೀಕಾರದವರೆಗೆ ಸಾಗುವ ಪಾಶ್ಚಾತ್ಯ ಸ್ತ್ರೀವಾದದ ಪಯಣವೇ ಕನ್ನಡ ಸಾಹಿತ್ಯದಲ್ಲಿ ಮಹಿಳೆಯ ಮೌನವನ್ನು ಸ್ವರವಾಗಿ, ಸ್ವರವನ್ನು ಸ್ವಾತಂತ್ರ್ಯವಾಗಿ ರೂಪಿಸುತ್ತದೆ.

**ಕನ್ನಡ ಸಾಹಿತ್ಯದಲ್ಲಿ ಸ್ತ್ರೀವಾದ:**

ಕನ್ನಡ ಸಾಹಿತ್ಯದಲ್ಲಿ ಸ್ತ್ರೀವಾದವು ಮಹಿಳೆಯರ ಜೀವನಾನುಭವ, ಶೋಷಣೆ, ಅಸಮಾನತೆ ಮತ್ತು ಸ್ವಾತಂತ್ರ್ಯದ ಹುಡುಕಾಟವನ್ನು ಪ್ರತಿಬಿಂಬಿಸುವ ಮಹತ್ವದ ಚಿಂತನೆ. ಇದು ಪಾಶ್ಚಿಮಾತ್ಯ ಪ್ರಭಾವದಿಂದ ಪ್ರೇರಿತವಾಗಿದ್ದರೂ, ಸ್ಥಳೀಯ ಸಂಸ್ಕೃತಿ, ಕುಟುಂಬ ವ್ಯವಸ್ಥೆ ಮತ್ತು ಸಾಮಾಜಿಕ ಸ್ಥಿತಿಗತಿಗಳೊಂದಿಗೆ ಬೆರೆತು ವಿಶಿಷ್ಟ ರೂಪ ಪಡೆದುಕೊಂಡಿದೆ. ಪಾಶ್ಚಿಮಾತ್ಯ ಸಾಹಿತ್ಯದಂತೆ ಇದರ ಬೆಳವಣಿಗೆಯನ್ನು ಕೂಡ ನಾವು ಮೂರು ಹಂತದಲ್ಲಿ ನೋಡಬಹುದು.

**1. ಮೊದಲ ಹಂತ – ಭಕ್ತಿಕಾಲ:**

ಭಕ್ತಿ ಕಾಲವು ಕನ್ನಡ ಸಾಹಿತ್ಯದಲ್ಲಿ ಕೇವಲ ಧಾರ್ಮಿಕ ಭಾವನೆಗಳ ವ್ಯಕ್ತೀಕರಣವಷ್ಟೇ ಅಲ್ಲದೆ, ಸಾಮಾಜಿಕ ಸಮಾನತೆ ಮತ್ತು ಆತ್ಮಸ್ವಾತಂತ್ರ್ಯದ ಘೋಷಣೆಯ ಮಹತ್ವದ ಹಂತವಾಗಿತ್ತು. ಈ ಕಾಲದಲ್ಲಿ ಕವಿಗಳು ದೇವರೊಂದಿಗೆ ನೇರ ಸಂಬಂಧವನ್ನು ಒತ್ತಿಹೇಳಿ, ಮಧ್ಯಸ್ಥರ ಅವಶ್ಯಕತೆಯನ್ನು ನಿರಾಕರಿಸಿದರು. ಜಾತಿ, ಲಿಂಗ ಮತ್ತು ವರ್ಗಭೇದಗಳನ್ನು ತಿರಸ್ಕರಿಸಿ ಎಲ್ಲರೂ ಸಮಾನರು ಎಂಬ ತತ್ವವನ್ನು ಸಾರಿದರು. ವಿಶೇಷವಾಗಿ ಅಕ್ಕಮಹಾದೇವಿ ಅವರಂತಹ ಕವಿಗಳು ಮಹಿಳಾ ಸ್ವಾತಂತ್ರ್ಯ ಮತ್ತು ಆತ್ಮಗೌರವದ ಧ್ವನಿಯನ್ನು ಬಲವಾಗಿ

ವ್ಯಕ್ತಪಡಿಸಿದರು. ಸರಳ ಕನ್ನಡ ಭಾಷೆಯಲ್ಲಿ ರಚಿತವಾದ ವಚನಗಳು ಜನಸಾಮಾನ್ಯರಿಗೆ ಸುಲಭವಾಗಿ ತಲುಪಿದವು. ಈ ಮೂಲಕ ಭಕ್ತಿ ಕಾಲವು ಕೇವಲ ಭಕ್ತಿಯ ಯುಗವಲ್ಲದೆ, ಸಮಾಜದ ಅನ್ಯಾಯಗಳನ್ನು ಪ್ರಶ್ನಿಸಿದ ಮತ್ತು ಮಹಿಳೆಯ ಧ್ವನಿಗೆ ದಾರಿತೋರಿದ ಕ್ರಾಂತಿಕಾರಿ ಸಾಹಿತ್ಯ ಯುಗವಾಗಿದೆ.

**"ಲಜ್ಜೆ ಎಂಬ ಸೀರೆಯನುಟ್ಟು, ಹೊದೆಯಲೆನ್ನದಿರಯ್ಯ**
**ಜಗವೆಲ್ಲ ಚನ್ನಮಲ್ಲಿಕಾರ್ಜುನನ ರೂಪಾಗಿ ಕಾಣುವಲ್ಲಿ**
**ನಾನ್ಯಾರಿಗೆ ನಾಚಲಿ? ಯಾರಿಗೆ ಅಂಜಲಿ?"**

**ಅರ್ಥ:** ಆತ್ಮಶುದ್ಧಿ ಇದ್ದಾಗ ಲೋಕದ ನಿಂದನೆಗೆ ಹೆದರುವ ಅವಶ್ಯಕತೆಯಿಲ್ಲ ಎಂಬ ಆತ್ಮವಿಶ್ವಾಸವನ್ನು ಇದು ಮಹಿಳೆಯರಿಗೆ ನೀಡುತ್ತದೆ.

**"ಮಾಯೆ ಎಂಬ ತಾಯಿ ಮುಂದೆ, ಸಂಸಾರವೆಂಬ ತಂದೆ ಮುಂದೆ...**
**ಗಂಡನೆಂಬ ಗಂಟಿನೊಳಗೆ ಸಿಲುಕಿ ನಲುಗುವ ಹೆಣ್ಣಲ್ಲ ನಾನು"**

**ಅರ್ಥ:** ಸಾಂಪ್ರದಾಯಿಕ ಕಟ್ಟುಪಾಡುಗಳಾದ ಅತ್ತೆ, ಮಾವ, ಗಂಡ ಎಂಬ ಬಂಧನಗಳನ್ನು ಭಕ್ತಿಯ ಹಾದಿಯಲ್ಲಿ ಮೆಟ್ಟಿ ನಿಲ್ಲಬಹುದು ಎಂದು ತೋರಿಸಿಕೊಟ್ಟಿದ್ದಾರೆ.

ಈ ರೀತಿಯಾಗಿ ನಾವು 12ನೇ ಶತಮಾನದ ಅಕ್ಕಮಹಾದೇವಿಯರ ಕಾಲದಲ್ಲಿಯೇ ಅವರ ವಚನಗಳ ಹಿನ್ನೆಲೆಯಲ್ಲಿ ಸ್ತ್ರೀವಾದದ ಅಸ್ಮಿತೆಯ ವಿವೇಚನೆಗಳನ್ನ ನೋಡಬಹುದು.

**2. ಎರಡನೆಯ ಹಂತ – ನವೋದಯ ಕಾಲ:**

ನವೋದಯ ಕಾಲಘಟ್ಟದಲ್ಲಿ ಮಹಿಳಾ ಲೇಖಕಿಯರು ಕನ್ನಡ ಸಾಹಿತ್ಯಕ್ಕೆ ಹೊಸ ಸಂವೇದನೆ ಮತ್ತು ಸ್ವ–ಅಸ್ತಿತ್ವದ ಅರಿವು ತಂದರು. ಈ ಅವಧಿಯಲ್ಲಿ ಮಹಿಳೆಯರು ತಮ್ಮ ಬದುಕಿನ ಅನುಭವಗಳನ್ನು ಧೈರ್ಯವಾಗಿ ವ್ಯಕ್ತಪಡಿಸಿ, ಪಿತೃಸತ್ವದ ಕಟ್ಟಳೆಗಳಿಗೆ ಸವಾಲು ಹಾಕಿದರು. ತ್ರಿವೇಣಿ ಅವರ ಕೃತಿಗಳಲ್ಲಿ ಮಹಿಳೆಯರ ಅಂತರಂಗದ ಗೊಂದಲ, ಮನೋವೈಕಲ್ಯ ಮತ್ತು ವ್ಯಕ್ತಿತ್ವದ ಹುಡುಕಾಟ ಸೂಕ್ಷ್ಮವಾಗಿ ಮೂಡಿಬರುತ್ತದೆ. ಎಂ.ಕೆ. ಇಂದಿರಾ ಅವರು ಮಹಿಳೆಯರ ಜೀವನದಲ್ಲಿನ ನೋವು, ಸಾಮಾಜಿಕ ಅಸಮಾನತೆ ಮತ್ತು ಅನ್ಯಾಯಗಳನ್ನು ಹೃದಯಸ್ಪರ್ಶಿಯಾಗಿ ಚಿತ್ರಿಸುತ್ತಾರೆ. ವೈದೇಹಿ ಅವರ ಕಥೆಗಳು ಮಹಿಳೆಯರ ಮೌನ ವಿರೋಧ, ಸ್ವಾತಂತ್ರ್ಯದ ಹಂಬಲ ಮತ್ತು ಆಂತರಿಕ ಬಲವನ್ನು ಸ್ಪಷ್ಟವಾಗಿ ವ್ಯಕ್ತಪಡಿಸುತ್ತವೆ.

ಈ ಲೇಖಕಿಯರ ಸಾಹಿತ್ಯವು ಮಹಿಳೆಯರ ಆತ್ಮಗೌರವ, ಸ್ವತಂತ್ರ ಚಿಂತನೆ ಮತ್ತು ಸಾಮಾಜಿಕ ಜಾಗೃತಿಯನ್ನು ಬಲಪಡಿಸಿ, ಕನ್ನಡ ಸ್ತ್ರೀವಾದ ಚಿಂತನೆಗೆ ಗಟ್ಟಿಯಾದ ಅಡಿಪಾಯವನ್ನು ನಿರ್ಮಿಸಿದೆ.

**ತ್ರಿವೇಣಿ:** ತ್ರಿವೇಣಿ ಅವರ ಶರಪಂಜರ ಕೃತಿಯಲ್ಲಿ ಪಾತ್ರಗಳ ಹೆಸರಿನ ಹಿಂದೆಯೂ ಸ್ತ್ರೀವಾದಿ ಅರ್ಥಸೂಚನೆ ಅಡಗಿದೆ. ವಿಶೇಷವಾಗಿ 'ಕಾವೇರಿ' ಎಂಬ ನಾಯಕಿಯ ಹೆಸರು ಹರಿಯುವ ನದಿಯನ್ನು ಸೂಚಿಸುವುದರಿಂದ, ಅವಳ ಸಹಜ ಸ್ವಾತಂತ್ರ್ಯ, ಹರಿವ ಮನಸ್ಸು ಮತ್ತು ಬದುಕಿನ ಉತ್ಸಾಹವನ್ನು ಪ್ರತಿನಿಧಿಸುತ್ತದೆ. ಆದರೆ ಆ ಸ್ವಾಭಾವಿಕ ಹರಿವು ಗೃಹಜೀವನದ ಕಟ್ಟಳೆಗಳು ಮತ್ತು ಪಿತೃಸತ್ವದ ನಿರ್ಬಂಧಗಳಿಂದ ತಡೆಗಟ್ಟಲ್ಪಡುತ್ತದೆ. ಇತರ ಪಾತ್ರಗಳೂ ಸಹ ಸಂಪ್ರದಾಯಬದ್ಧ ಮೌಲ್ಯಗಳನ್ನು ಪ್ರತಿನಿಧಿಸುವ ಮೂಲಕ, ಮಹಿಳೆಯನ್ನು ಒಂದು ನಿರ್ದಿಷ್ಟ ಪಾತ್ರಕ್ಕೆ ಸೀಮಿತಗೊಳಿಸುವ ಸಮಾಜದ ಮನೋಭಾವವನ್ನು ತೋರಿಸುತ್ತವೆ. ಈ ರೀತಿಯಾಗಿ

ಪಾತ್ರಗಳ ಹೆಸರುಗಳೇ ಮಹಿಳೆಯ ಸ್ವಭಾವ ಮತ್ತು ಅವಳ ಮೇಲೆ ಸಮಾಜ ವಿಧಿಸುವ ನಿಯಂತ್ರಣಗಳ ನಡುವಿನ ಸಂಘರ್ಷವನ್ನು ಸಂಕೇತಾತ್ಮಕವಾಗಿ ವ್ಯಕ್ತಪಡಿಸುತ್ತವೆ. ಹೀಗಾಗಿ, ಈ ಕೃತಿಯಲ್ಲಿ ಹೆಸರುಗಳ ಬಳಕೆ ಕೇವಲ ಗುರುತಿಗಾಗಿ ಮಾತ್ರವಲ್ಲ, ಸ್ತ್ರೀವಾದಿ ಚಿಂತನೆಯ ಆಳವನ್ನು ಸೂಚಿಸುವ ಸಾಹಿತ್ಯಿಕ ಸಾಧನವಾಗಿಯೂ ಕಾರ್ಯನಿರ್ವಹಿಸುತ್ತದೆ.

**ಎಂ.ಕೆ. ಇಂದಿರಾ:** ಎಂ.ಕೆ. ಇಂದಿರಾ ಅವರ ಕೃತಿಗಳಲ್ಲಿ ಪಾತ್ರಗಳ ಹೆಸರೇ ಸ್ತ್ರೀವಾದಿ ಅರ್ಥಸೂಚನೆಗಳನ್ನು ಹೊತ್ತುಕೊಂಡಿವೆ. ಸಾಮಾನ್ಯವಾಗಿ 'ಸೀತಾ', 'ಗೌರಿ', 'ಸಾವಿತ್ರಿ' ಮೊದಲಾದ ಸಂಪ್ರದಾಯಬದ್ಧ ಹೆಸರುಗಳನ್ನು ಬಳಸುವುದರಿಂದ, ಮಹಿಳೆಯನ್ನು ಸಹನೆ, ತ್ಯಾಗ ಮತ್ತು ಮೌನಕ್ಕೆ ಸೀಮಿತಗೊಳಿಸುವ ಪಿತೃಸತ್ವದ ನಿರೀಕ್ಷೆಗಳು ವ್ಯಕ್ತವಾಗುತ್ತವೆ. ಆದರೆ ಕಥೆಯ ಪ್ರಗತಿಯಲ್ಲಿ ಈ ಪಾತ್ರಗಳು ತಮ್ಮ ಒಳಗಿನ ನೋವು, ಅಸಮಾಧಾನ ಮತ್ತು ಸ್ವಾತಂತ್ರ್ಯದ ಹಂಬಲವನ್ನು ಹೊರಹಾಕುವ ಮೂಲಕ ಆ ಸಾಂಪ್ರದಾಯಿಕ ಪಾತ್ರಚಿತ್ರಣಕ್ಕೆ ಸವಾಲು ಹಾಕುತ್ತವೆ. ಈ ಮೂಲಕ ಹೆಸರುಗಳು ಒಂದೆಡೆ ಸಮಾಜ ವಿಧಿಸುವ ಮೌಲ್ಯಗಳನ್ನು ಸೂಚಿಸಿದರೆ, ಮತ್ತೊಂದೆಡೆ ಆ ಮೌಲ್ಯಗಳನ್ನು ಮೀರಿ ಹೊರಬರುವ ಮಹಿಳೆಯ ಆಂತರಿಕ ಹೋರಾಟವನ್ನು ಸಂಕೇತಿಸುತ್ತವೆ. ಹೀಗಾಗಿ, ಎಂ.ಕೆ. ಇಂದಿರಾ ಅವರ ಕೃತಿಗಳಲ್ಲಿ ಪಾತ್ರಗಳ ಹೆಸರಿನ ಹಿನ್ನೆಲೆ ಸ್ತ್ರೀವಾದಿ ಚಿಂತನೆಗೆ ಸಂಕೇತಾತ್ಮಕ ಮತ್ತು ವಿಮರ್ಶಾತ್ಮಕ ಅರ್ಥ ನೀಡುತ್ತದೆ.

**3. ಮೂರನೇ ಹಂತ – ಸಮಕಾಲೀನ ಸಾಹಿತ್ಯ:**

ಸಮಕಾಲೀನ ಕನ್ನಡ ಸಾಹಿತ್ಯದಲ್ಲಿ ಸ್ತ್ರೀವಾದಿ ಚಿಂತನೆಗಳು ಹೆಚ್ಚು ಸ್ಪಷ್ಟ ಮತ್ತು ಪ್ರಭಾವಶಾಲಿಯಾಗಿ ವ್ಯಕ್ತವಾಗುತ್ತವೆ. ಈ ಕಾಲಘಟ್ಟದ ಸಾಹಿತ್ಯವು ಮಹಿಳೆಯರ ಮೇಲೆ ನಡೆಯುವ ಶೋಷಣೆ, ಅಸಮಾನತೆ, ಲಿಂಗಭೇದ ಮತ್ತು ಸಾಮಾಜಿಕ ಅನ್ಯಾಯಗಳನ್ನು ತೀವ್ರವಾಗಿ ಪ್ರಶ್ನಿಸುತ್ತದೆ. ಮಹಿಳೆಯನ್ನು ಕೇವಲ ಗೃಹಪಾತ್ರಕ್ಕೆ ಸೀಮಿತಗೊಳಿಸುವ ಪಿತೃಸತ್ವದ ಮನೋಭಾವವನ್ನು ವಿರೋಧಿಸಿ, ಅವಳ ಸ್ವಾತಂತ್ರ್ಯ ಮತ್ತು ಆತ್ಮಗೌರವವನ್ನು ಪ್ರತಿಪಾದಿಸುತ್ತದೆ. ವೈದೇಹಿ, ಸಾರಾ ಅಬೂಬಕರ್ ಮೊದಲಾದ ಲೇಖಕಿಯರು ತಮ್ಮ ಕೃತಿಗಳಲ್ಲಿ ಮಹಿಳೆಯರ ಅಂತರಂಗದ ಸಂಕಷ್ಟ, ಮೌನ ಹೋರಾಟ ಮತ್ತು ಸಾಮಾಜಿಕ ಬಿಗಿಬಂಧನಗಳನ್ನು ಸೂಕ್ಷ್ಮವಾಗಿ ಚಿತ್ರಿಸಿದ್ದಾರೆ.

ಈ ಸಾಹಿತ್ಯದಲ್ಲಿ ಮಹಿಳೆಯರು ತಮ್ಮ ಸ್ವ–ಅಸ್ತಿತ್ವವನ್ನು ಅರಿತುಕೊಳ್ಳುವ ಪ್ರಯತ್ನ, ಸ್ವತಂತ್ರ ನಿರ್ಧಾರಗಳನ್ನು ತೆಗೆದುಕೊಳ್ಳುವ ಧೈರ್ಯ ಮತ್ತು ಸಮಾಜದ ಕಟ್ಟಳೆಗಳಿಗೆ ವಿರುದ್ಧವಾಗಿ ನಿಲ್ಲುವ ಮನೋಬಲವನ್ನು ತೋರಿಸುತ್ತಾರೆ. ಹೀಗಾಗಿ, ಸಮಕಾಲೀನ ಸಾಹಿತ್ಯವು ಮಹಿಳೆಯರ ನಿಜಜೀವನದ ಅನುಭವಗಳನ್ನು ಆಧರಿಸಿಕೊಂಡು, ಸಮಾನತೆ, ಸ್ವಾತಂತ್ರ್ಯ ಮತ್ತು ನ್ಯಾಯಕ್ಕಾಗಿ ನಡೆಯುವ ಹೋರಾಟವನ್ನು ಪರಿಣಾಮಕಾರಿಯಾಗಿ ಪ್ರತಿಬಿಂಬಿಸುತ್ತದೆ.

ವೈದೇಹಿ ಅವರ ಕೃತಿಗಳ ಹಿನ್ನೆಲೆಯಲ್ಲಿ ಸಮಕಾಲೀನ ಕನ್ನಡ ಸಾಹಿತ್ಯದಲ್ಲಿ ಸ್ತ್ರೀವಾದಿ ಚಿಂತನೆಗಳು ಸೂಕ್ಷ್ಮವಾದರೂ ಪ್ರಭಾವಶಾಲಿಯಾಗಿ ವ್ಯಕ್ತವಾಗುತ್ತವೆ. ವೈದೇಹಿ ತಮ್ಮ ಕಥೆಗಳು ಮತ್ತು ಕಾದಂಬರಿಗಳಲ್ಲಿ ಮಹಿಳೆಯರ ಅಂತರಂಗದ ಲೋಕವನ್ನು ಅತ್ಯಂತ ನೈಜವಾಗಿ ಚಿತ್ರಿಸುತ್ತಾರೆ. ಅವರ ಬರಹಗಳಲ್ಲಿ ಮಹಿಳೆಯರ ದೈನಂದಿನ ಬದುಕಿನ ಒತ್ತಡ, ಮೌನ ಶೋಷಣೆ, ಕುಟುಂಬ ಮತ್ತು ಸಮಾಜದ ನಿರ್ಬಂಧಗಳು ಸ್ಪಷ್ಟವಾಗಿ ಕಾಣಿಸುತ್ತವೆ. ಆದರೆ ಈ ಪಾತ್ರಗಳು ಸಂಪೂರ್ಣವಾಗಿ ದೀನವಾಗಿರದೆ, ತಮ್ಮೊಳಗಿನ ಆತ್ಮಗೌರವ ಮತ್ತು ಸ್ವಾತಂತ್ರ್ಯದ ಹಂಬಲವನ್ನು ಉಳಿಸಿಕೊಂಡು, ಮೌನದ ಮೂಲಕವೇ ಪ್ರತಿರೋಧ ವ್ಯಕ್ತಪಡಿಸುತ್ತವೆ.

- ಮರಗಿಡ ಬಳ್ಳಿ – ಮಹಿಳೆಯ ಜೀವನದ ಸೂಕ್ಷ್ಮ ಅನುಭವಗಳು, ಒಳಮನಸ್ಸಿನ

ಸ್ಪಂದನೆಗಳು.

- ಅಂತರಂಗದ ಪುಟಗಳು – ಮಹಿಳೆಯ ಅಂತರಂಗದ ಭಾವನೆಗಳು ಮತ್ತು ಸಂಘರ್ಷಗಳು.
- ಗುಲಾಬಿ ಟಾಕೀಸ್ – ಸಮಾಜದಲ್ಲಿ ಮಹಿಳೆಯ ಸ್ಥಾನ, ಅಲ್ಪಸಂಖ್ಯಾತರ ಬದುಕು.
- ಕಡೆಗೊಮ್ಮೆ – ದೈನಂದಿನ ಬದುಕಿನ ಮೌನ ಹೋರಾಟಗಳು.
- ಆಸ್ಪದ – ಮಹಿಳೆಯ ಸ್ವಾತಂತ್ರ್ಯ ಮತ್ತು ಆತ್ಮಗೌರವದ ಪ್ರಶ್ನೆಗಳು.

ಈ ಕೃತಿಗಳ ಮೂಲಕ ವೈದೇಹಿಯವರು ಮಹಿಳೆಯರ ಶೋಷಣೆ, ಅಸಮಾನತೆ ಮತ್ತು ಸ್ವ–ಅಸ್ತಿತ್ವದ ಹುಡುಕಾಟವನ್ನು ನೈಜವಾಗಿ ಮತ್ತು ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ.

ಸಾರಾ ಅಬೂಬಕರ್ ಅವರ ಕೃತಿಗಳ ಹಿನ್ನೆಲೆಯಲ್ಲಿ ಸಮಕಾಲೀನ ಕನ್ನಡ ಸಾಹಿತ್ಯದಲ್ಲಿ ಸ್ತ್ರೀವಾದಿ ಚಿಂತನೆಗಳು ಸ್ಪಷ್ಟ ಮತ್ತು ತೀವ್ರ ರೂಪದಲ್ಲಿ ವ್ಯಕ್ತವಾಗುತ್ತವೆ. ಸಾರಾ ಅಬೂಬಕರ್ ಅವರು ವಿಶೇಷವಾಗಿ ಮುಸ್ಲಿಂ ಸಮಾಜದ ಮಹಿಳೆಯರ ಬದುಕನ್ನು ಕೇಂದ್ರೀಕರಿಸಿ, ಅವರ ಮೇಲೆ ನಡೆಯುವ ಶೋಷಣೆ, ಅಸಮಾನತೆ ಮತ್ತು ಧಾರ್ಮಿಕ–ಸಾಮಾಜಿಕ ನಿರ್ಬಂಧಗಳನ್ನು ನೈಜವಾಗಿ ಚಿತ್ರಿಸುತ್ತಾರೆ. ಅವರ ಕಥೆಗಳು ಮತ್ತು ಕಾದಂಬರಿಗಳಲ್ಲಿ ಮಹಿಳೆಯರು ಕುಟುಂಬ ಮತ್ತು ಸಂಪ್ರದಾಯಗಳ ನಡುವೆ ಸಿಲುಕಿಕೊಂಡು ತಮ್ಮ ಸ್ವಾತಂತ್ರ್ಯವನ್ನು ಕಳೆದುಕೊಳ್ಳುವ ಸ್ಥಿತಿಯನ್ನು ಕಾಣಬಹುದು.

- ಚಂದ್ರಗಿರಿಯ ತೀರದಲ್ಲಿ – ಮುಸ್ಲಿಂ ಮಹಿಳೆಯರ ಜೀವನ, ಸಾಮಾಜಿಕ ನಿರ್ಬಂಧಗಳು.
- ಹಸೀನಾ – ಕುಟುಂಬ ಮತ್ತು ಸಮಾಜದ ನಡುವೆ ಸಿಲುಕಿದ ಮಹಿಳೆಯ ಬದುಕು.
- ವಜ್ರಗಳು – ಮಹಿಳೆಯರ ಮೇಲೆ ನಡೆಯುವ ಅನ್ಯಾಯ ಮತ್ತು ಅಸಮಾನತೆ.
- ಪಂಜರ – ಮಹಿಳೆಯ ಬಂಧನ ಮತ್ತು ಸ್ವಾತಂತ್ರ್ಯದ ಹಂಬಲ.

ಈ ಕೃತಿಗಳಲ್ಲಿ ಅವರು ಮಹಿಳೆಯರ ಶೋಷಣೆ, ಧಾರ್ಮಿಕ–ಸಾಮಾಜಿಕ ಕಟ್ಟಳೆಗಳು ಮತ್ತು ಸ್ವ–ಅಸ್ತಿತ್ವದ ಹುಡುಕಾಟವನ್ನು ಸ್ಪಷ್ಟವಾಗಿ ಚಿತ್ರಿಸಿದ್ದಾರೆ.

**ಸಮಾರೋಪ**

ಎರಡೂ ಪರಂಪರೆಗಳು ಮಹಿಳೆಯ ಸ್ಥಿತಿ, ಹಕ್ಕುಗಳು ಮತ್ತು ಅಸ್ತಿತ್ವದ ಪ್ರಶ್ನೆಗಳನ್ನು ವಿಭಿನ್ನ ರೀತಿಯಲ್ಲಿ ಪ್ರತಿಬಿಂಬಿಸುತ್ತವೆ. ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಅನುಭವವು ಸ್ಥಳೀಯ ಸಂಸ್ಕೃತಿ, ಕುಟುಂಬ ವ್ಯವಸ್ಥೆ ಮತ್ತು ಭಾಷೆಯ ಸೂಕ್ಷ್ಮ ಭಾವನೆಗಳ ಮೂಲಕ ವ್ಯಕ್ತವಾಗುತ್ತದೆ; ಇದರಲ್ಲಿ ಮಹಿಳೆಯ ಮೌನವೇ ಅನೇಕ ಬಾರಿ ಪ್ರತಿಭಟನೆಯ ರೂಪವಾಗುತ್ತದೆ. ಇತ್ತ ಪಾಶ್ಚಿಮಾತ್ಯ ಸ್ತ್ರೀವಾದವು ತತ್ತ್ವಶಾಸ್ತ್ರೀಯ ಮತ್ತು ರಾಜಕೀಯ ಹಕ್ಕುಗಳ ದೃಷ್ಟಿಯಿಂದ ಮಹಿಳೆಯ ಸ್ವಾತಂತ್ರ್ಯವನ್ನು ಸ್ಪಷ್ಟವಾಗಿ ಒತ್ತಿ ಹೇಳುತ್ತದೆ. ಕನ್ನಡ ಕೃತಿಗಳಲ್ಲಿ ಸಂಪ್ರದಾಯದೊಂದಿಗೆ ಸಂವಾದ ನಡೆಸುವ ಧೋರಣೆ ಕಂಡುಬರುತ್ತದೆ, ಆದರೆ ಪಶ್ಚಿಮದಲ್ಲಿ ಸಂಪ್ರದಾಯವನ್ನು ಪ್ರಶ್ನಿಸುವುದು ಮತ್ತು ಬದಲಾವಣೆ ತರಲು ಚಳುವಳಿ ರೂಪದಲ್ಲಿ ನಡೆದುಬರುತ್ತದೆ. ಕನ್ನಡ ಸಾಹಿತ್ಯವು ಮಹಿಳೆಯ ಒಳಜಗತ್ತಿನ ಭಾವನೆಗಳು, ತಾಯಿ–ಪತ್ನಿ–ಕಾರ್ಮಿಕೆಯ ಪಾತ್ರಗಳ ಸಂಯೋಜನೆ ಮತ್ತು ಸಹನೆ–ಸ್ಥೈರ್ಯವನ್ನು ಶಕ್ತಿಯಾಗಿ ಚಿತ್ರಿಸುತ್ತದೆ; ಪಶ್ಚಿಮ ಸ್ತ್ರೀವಾದವು ವ್ಯಕ್ತಿತ್ವದ ಸ್ವಾತಂತ್ರ್ಯ, ಸಾಮಾಜಿಕ ರಚನೆಗಳ ವಿಮರ್ಶೆ ಮತ್ತು ವಿರೋಧದ ಮೂಲಕ ಬದಲಾವಣೆಯನ್ನು ಮುಖ್ಯವಾಗಿಸುತ್ತದೆ. ಗ್ರಾಮೀಣ

ಹಿನ್ನೆಲೆ ಕನ್ನಡ ಸ್ತ್ರೀವಾದಕ್ಕೆ ಜೀವ ತುಂಬಿದರೆ, ನಗರೀಕರಣ ಪಶ್ಚಿಮ ಸ್ತ್ರೀವಾದದ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರವಹಿಸಿದೆ. ಈ ರೀತಿ, ಎರಡೂ ಪರಂಪರೆಗಳು ಮಹಿಳೆಯ ಗೌರವ ಮತ್ತು ಸಮಾನತೆಯನ್ನು ಗುರಿಯಾಗಿಸಿಕೊಂಡಿದ್ದರೂ, ಅವುಗಳ ಅಭಿವ್ಯಕ್ತಿಯ ಮಾರ್ಗಗಳು ವಿಭಿನ್ನ ಸಂಸ್ಕೃತಿ ಮತ್ತು ಅನುಭವಗಳ ಪ್ರತಿಬಿಂಬವಾಗಿವೆ.

**ಪರಾಮರ್ಶನ ಗ್ರಂಥಗಳು:**

1. ವಿಜಯಾ ದಬ್ಬೆ, ಸ್ತ್ರೀವಾದ – ಒಂದು ಪರಿಚಯ,
2. ಕಮಲಾ ಹಂಪನಾ, ಸ್ತ್ರೀವಾದಿ ಸಾಹಿತ್ಯ ವಿಮರ್ಶೆ, ಬೆಂಗಳೂರು: ಸಿ.ವಿ.ಜಿ. ಪಬ್ಲಿಕೇಷನ್ಸ್.
3. ಶ್ರೀಮತಿ ಎಚ್.ಎಸ್., ಸ್ತ್ರೀ ಅಸ್ತಿತ್ವ ಮತ್ತು ಸಾಹಿತ್ಯ, ಬೆಂಗಳೂರು: ನವಕರ್ನಾಟಕ ಪ್ರಕಾಶನ.
4. ರಾಮಚಂದ್ರನ್ ಸಿ.ಎನ್., ಸಾಹಿತ್ಯ ವಿಮರ್ಶೆ, ಬೆಂಗಳೂರು: ನವಕರ್ನಾಟಕ ಪ್ರಕಾಶನ.
5. ಬೆಲ್ ಹೂಕ್ಸ್, (2000), ಫೆಮಿನಿಸಂ ಇಸ್ ಫಾರ್ ಎವೆರಿಬಾಡಿ, ನ್ಯೂಯಾರ್ಕ್: ಸೌತ್ ಎಂಡ್ ಪ್ರೆಸ್.